# ವಿಶ್ವದಲ್ಲಿ ಭಾರತ ಕ್ರಿಕೆಟಿಗರ ಜಾಡು

■ ವಿಕ್ರಂ ಕಾಂತಿಕೆರೆ

ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಐರ್ಲೆಂಡ್ ವಿರುದ್ಧದ ಬಿ ಗುಂಪಿನ ಪಂದ್ಯದಲ್ಲಿ ಒಮಾನ್‌ನ ಎಡಗೈ ಸ್ಪಿನ್ನರ್, ಪಾಕಿಸ್ತಾನದಲ್ಲಿ ಜನಿಸಿದ ಶಕೀಲ್ ಅಹಮ್ಮದ್ ಬೌಲಿಂಗ್ ಮಾಡುತ್ತಿದ್ದಾಗ ಅವರಿಗೆ ಹುರಿದುಂಬಿಸುತ್ತಿದ್ದ ಮತ್ತು ಸಲಹೆ ನೀಡುತ್ತಿದ್ದ ಜಿತೇಂದರ್ ಸಿಂಗ್ ಮಾತನಾಡುತ್ತಿದ್ದದ್ದು ಹಿಂದಿಯಲ್ಲಿ. ಅರೆಬಿಕ್ ರಾಷ್ಟ್ರಭಾಷೆಯಾಗಿರುವ ಒಮಾನ್ ಎಲ್ಲಿ, ಐರಿಷ್ ಭಾಷೆ ಮಾತನಾಡುವವರ ಐರ್ಲೆಂಡ್ ಎಲ್ಲಿ, ಭಾರತದ ಹಿಂದಿ ಎಲ್ಲಿ...?

ವಿಶ್ವಕಪ್ ಟೂರ್ನಿಯಲ್ಲಿ ಕ್ರಿಕೆಟ್ ಜೊತೆ ಹೀಗೆ ಭಾಷೆ, ಸಂಸ್ಕೃತಿ ಮತ್ತು ದೇಶಗಳ ನಡುವಿನ ಬಾಂಧವ್ಯ ಹರಡುವ ಮತ್ತು ಗಟ್ಟಿಗೊಳ್ಳುವ ಎಳೆಯೂ ಇದೆ. ಇದಕ್ಕೆ ಮುಖ್ಯ ಕಾರಣ ವಿವಿಧ ತಂಡಗಳಲ್ಲಿ ಅನ್ಯರಾಷ್ಟ್ರದ ಆಟಗಾರರು ಆಡುತ್ತಿರುವುದು. ಭಾರತ ಮೂಲದ ಆಟಗಾರರಂತೂ ಈ ವಿಷಯದಲ್ಲಿ ಹಲವು ಹೆಜ್ಜೆ ಮುಂದೆ ಇದ್ದಾರೆ. ಭಾರತದಲ್ಲಿ ಜನಿಸಿದ ಅಥವಾ ಭಾರತದ ನಂಟು ಹೊಂದಿರುವ ಆಟಗಾರರು ಈ ಬಾರಿ ಕಣದಲ್ಲಿರುವ 20 ತಂಡಗಳ ಪೈಕಿ ಏಳರಲ್ಲಿ ಇದ್ದಾರೆ. ಕೆನಡಾ, ಒಮಾನ್ ಮತ್ತು ಅಮೆರಿಕದ ನಾಯಕತ್ವವೇ ಭಾರತ ಮೂಲದವರ ಕೈಯಲ್ಲಿದೆ.

ಈ ಬಾರಿಯ ವಿಶ್ವಕಪ್‌ನಲ್ಲಿ ಆಡಲು ವಿವಿಧ ತಂಡಗಳಿಗೆ ಆಯ್ಕೆಯಾಗಿರುವವರ ಪೈಕಿ 40ರಷ್ಟು ಮಂದಿ ಭಾರತ ಮೂಲದವರು. ಕೆನಡಾದ 15 ಸದಸ್ಯರ ತಂಡದಲ್ಲಂತೂ 11 ಮಂದಿ ಭಾರತೀಯರು, ಪೂರ್ತಿ ತಂಡವೊಂದನ್ನು ಕಟ್ಟುವಷ್ಟು ಆಟಗಾರರು. ಅಮೆರಿಕ ತಂಡದಲ್ಲಿ 9 ಮಂದಿ ಇದ್ದರೆ, ಒಮಾನ್ ಮತ್ತು ಯುಎಇ ತಂಡಗಳಲ್ಲೂ ಭಾರತ ಮೂಲದವರ ಪ್ರಾತಿನಿಧ್ಯ ತಲಾ 7ರಷ್ಟು ಇದೆ. ಚೊಚ್ಚಲ ವಿಶ್ವಕಪ್ ಆಡುತ್ತಿರುವ, ಫುಟ್‌ಬಾಲ್‌ಗೆ ಮಾರುಹೋಗಿರುವ ಇಟಲಿ ತಂಡದಲ್ಲೂ ಇದ್ದಾರೆ ಭಾರತ ಮೂಲದವರು.

2024ರ ವಿಶ್ವಕಪ್ ಟೂರ್ನಿಯಲ್ಲಿ ಅಮೆರಿಕವನ್ನು ಮುನ್ನಡೆಸಿದ ಮೊನಾಂಕ್ ಪಟೇಲ್ ಅವರಿಗೆ ಈ ಬಾರಿಯೂ ನಾಯಕತ್ವದ ಜವಾಬ್ದಾರಿ ವಹಿಸಲಾಗಿದೆ. ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಲೇಖಕ, ಪರಿಸರ ಚಿಂತಕ ಪ್ರದೀಪ್ ಕೆಂಜಿಗೆ ಅವರ ಪುತ್ರ ನೊಷ್ತುಷ್ ಕೆಂಜಿಗೆ ಅಮೆರಿಕ ತಂಡದ ಪ್ರಮುಖ ಆಟಗಾರ. ಭಾರತದ ಎದುರಿನ ಪಂದ್ಯದಲ್ಲಿ 2 ಸಿಕ್ಸರ್ ಸಿಡಿಸಿ 31 ಎಸೆತಗಳಲ್ಲಿ 37 ರನ್ ಗಳಿಸಿದ ಅಮೆರಿಕದ ಸಂಜಯ್ ಕೃಷ್ಣಮೂರ್ತಿ ಬೆಂಗಳೂರಿನವರು. ರಾಹುಲ್ ದ್ರಾವಿಡ್ ಮತ್ತು ಸಚಿನ್ ಹೆಸರಿನ ಮಿಶ್ರಣದ, ನ್ಯೂಜಿಲೆಂಡ್‌ನ ರಚಿನ್ ರವೀಂದ್ರ ಅವರ ಕುಟುಂಬದ ಬೇರುಗಳು ಇರುವುದೂ ಬೆಂಗಳೂರಿನಲ್ಲೇ.

ಯುವರಾಜ್ ಸಿಂಗ್ ಅವರ ಅಪ್ಪಟ ಅಭಿಮಾನಿ ಬಲ್ಜೀತ್ ಸಮ್ರಾ ಕ್ರಿಕೆಟ್ ಮೇಲಿನ ಪ್ರೀತಿಯಿಂದ ತಮ್ಮ ಪುತ್ರನಿಗೆ ಯುವರಾಜ್ ಸಿಂಗ್ ಸಮ್ರಾ ಎಂದು ಹೆಸರಿಟ್ಟರು. ಆ ಯುವರಾಜ ಈಗ ಕೆನಡಾ ತಂಡದ ಆರಂಭಿಕ ಬ್ಯಾಟರ್. ಬಲಗೈ ವೇಗದ ಬೌಲರ್ ಕೂಡ ಆಗಿರುವ ಯುವರಾಜ್ ಸಿಂಗ್ ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ 110 ರನ್ ಗಳಿಸಿ ಈ ಬಾರಿಯ ಟೂರ್ನಿಯ ಮೊದಲ ಶತಕ ಸಿಡಿಸಿದ ಆಟಗಾರ ಎಂಬ ಶ್ರೇಯಸ್ಸು ತಮ್ಮದಾಗಿಸಿಕೊಂಡಿದ್ದಾರೆ. 6 ಸಿಕ್ಸರ್ ಮತ್ತು 11 ಬೌಂಡರಿಗಳ ಚಿತ್ತಾರ ಬಿಡಿಸಿದ ಅವರು 65 ಎಸೆತಗಳಲ್ಲಿ ಕಲೆ ಹಾಕಿದ 110 ರನ್‌ಗಳ ಇನಿಂಗ್ಸ್ ಸೋಲಿನ ನಡುವೆಯೂ ಕೆನಡಾ ಕ್ರಿಕೆಟ್‌ಪ್ರಿಯರ ನೆನಪಿನಲ್ಲಿ ಬಹುಕಾಲ ಅಥವಾ ಚಿರಕಾಲ ಉಳಿಯುವಂಥದ್ದು.

ಪಂಜಾಬ್‌ನ ಬಿಯಾಸ್ ಮತ್ತು ರಾಬಿ ನದಿಯ ನಡುವಿನ ಗುರುದಾಸ್‌ಪುರ್‌ನಲ್ಲಿ ಜನಿಸಿದ ದಿಲ್‌ಪ್ರೀತ್ ಸಿಂಗ್ ಬಾಜ್ವ, ಆಫ್ ಬ್ರೇಕ್ ಚಾಕಚಕ್ಯತೆ ಮೆರೆಯುತ್ತಿರುವ ಕೆನಡಾದ ಬೌಲಿಂಗ್ ಆಲ್‌ರೌಂಡರ್. ಭಾರತೀಯ ಸೇನೆಯಲ್ಲಿ ಮನೆತನದ ಮೂಲ ಹೊಂದಿರುವ ಅಜಯ್ ವೀರ್ ಸಿಂಗ್ ಹುಂದಾಲ್ ಅವರ ಸಂಬಂಧಿಕರು ಈಗಲೂ ದಕ್ಷಿಣ ದೆಹಲಿಯ ಗ್ರೇಟರ್ ಕೈಲಾಶ್ ಪ್ರದೇಶದಲ್ಲಿದ್ದಾರೆ. ಐಸ್ ಹಾಕಿ ಆಟಗಾರ ಅಜಯ್‌ವೀರ್, ಚಂಡೀಗಢದಲ್ಲಿ ಜನಿಸಿದ ನವನೀತ್ ಸಿಂಗ್ ಧಲಿವಾಲ್ ಅವರೂ ಕೆನಡದ ಆಲ್‌ರೌಂಡರ್‌ಗಳು. ಶ್ರೇಯಸ್ ಮೊವ್ವ ಗುಂಟೂರಿನವರು.

## ಅರ್ಹತಾ ಪಂದ್ಯದಲ್ಲೂ ಆಗಿತ್ತು ದಾಖಲೆ

ಕೆನಡಾ ತಂಡದಲ್ಲಿ ಆಡುತ್ತಿರುವ ಹರ್ಷ ಥಾಕರ್ ಅವರ ತಂದೆ ತುಷಾರ್ ಕ್ರಿಕೆಟ್ ಅಭಿಮಾನಿ. ವಿಶ್ವವಿದ್ಯಾಲಯ ಮಟ್ಟದಲ್ಲಿ ಆಡಿದ್ದ ಅವರು ಮಗನಲ್ಲೂ ಆಟದ ಕೆಚ್ಚು ತುಂಬಿದ್ದರು. ಬಲಗೈ ಬ್ಯಾಟರ್ ಮತ್ತು ಆಫ್ ಬ್ರೇಕ್ ಬೌಲರ್ ಆಗಿರುವ ಹರ್ಷ ಥಾಕರ್ ಈ ಬಾರಿಯ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯದಲ್ಲಿ 16 ಎಸೆತಗಳಲ್ಲಿ ಅರ್ಧಶತಕ ಸಿಡಿಸಿ ಕೆನಡಾ ಪರವಾಗಿ ಟ್ವೆಂಟಿ 20 ಪಂದ್ಯದಲ್ಲಿ ವೇಗದ ಅರ್ಧಶತಕ ಸಿಡಿಸಿದ ಆಟಗಾರ ಎನಿಸಿಕೊಂಡಿದ್ದರು. ಇದು ನಡೆದದ್ದು 2025ರ ಜೂನ್‌ನಲ್ಲಿ. ಆದರೆ ಆ ದಾಖಲೆಯನ್ನು ಒಂದು ವಾರದೊಳಗೆ ಯುವರಾಜ್ ಸಿಂಗ್




ಜತಿಂದರ್ ಸಿಂಗ್

ನೋಷ್ತುಷ್ ಕೆಂಜಿಗೆ

ಇಟಲಿ ತಂಡದ ಜಸ್‌ಪ್ರೀತ್ ಸಿಂಗ್